ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ: ಸ.ನಿ(ಶಾ.ಶಿ)ಶಾಲಾ ಪೋಷಣೆ/2011-12 ದಿನಾಂಕ:28-06-2011

ಸುತ್ತೋಲೆ

ವಿಷಯ: ಶಾಲೆಗಾಗಿ ನಾವು-ನೀವು ಅಭಿಯಾನ

ಉಲ್ಲೇಖ: ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 159 ಎಂಸಿಡಿ2011 ದಿನಾಂಕ: 18-06-2011.

------------

ದಿನಾಂಕ:05-06-2011ರಂದು ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಹಮ್ಮಿಕೊಂಡಿರುವ "ಮಕ್ಕಳ ಶಿಕ್ಷಣದ ಹಕ್ಕು, ನಮ್ಮ ಹೊಣೆ" ಕಾರ್ಯಕ್ರಮದ ಹಿನ್ನಲೆಯಲ್ಲಿ ಆ ದಿನದ ಸೂಚಿತ ಚಟುವಟಿಕೆಗಳಿಗೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಸುತ್ತೋಲೆಯನ್ವಯ ಈ ಕೆಳಗಿನ ಮಾರ್ಗದರ್ಶನಗಳನ್ನು ನೀಡಲಾಗಿದೆ.

**ಚಟುವಟಿಕೆಗಳ ಅನುಷ್ಠಾನ ಯೋಜನೆ**

| ಕ್ರ.ಸಂ | ಚಟುವಟಿಕೆ | ಮಾರ್ಗದರ್ಶನ /ಪೂರ್ವ ತಯಾರಿ | ಜವಾಬ್ದಾರಿ |
|---|---|---|---|
| 1 | ಜುಲೈ 5ರ ಕಾರ್ಯಕ್ರಮದ ಸಂಯೋಜನೆ | ಜುಲೈ 5ರಂದು ಶಾಲೆಗಾಗಿ ನಾವು-ನೀವು ಕಾರ್ಯಕ್ರಮವನ್ನು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ನೇತೃತ್ವದಲ್ಲಿ ಹಮ್ಮಿಕೊಳ್ಳುವುದು. | ಉಪನಿರ್ದೇಶಕರು ಆಡಳಿತ/ ಅಭಿವೃದ್ಧಿ |
| 2 | ಚುನಾಯಿತ ಪ್ರತಿನಿಧಿಗಳ ಭಾಗವಹಿಸುವಿಕೆ | 1. ಸಚಿವರು, ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಜಿಲ್ಲಾ/ ತಾಲ್ಲೂಕು/ ಗ್ರಾಮ ಪಂಚಾಯತ್, ಮಹಾನಗರ ಪಾಲಿಕೆ, ನಗರ ಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಯ ಎಲ್ಲಾ ಸದಸ್ಯರು ತಮ್ಮ ಕ್ಷೇತ್ರದ ಒಂದು ಶಾಲೆಗೆ ಭೇಟಿ ನೀಡುವಂತೆ ಕ್ರಮಕೈಗೊಳ್ಳುವುದು.<br>2. ಪ್ರತಿಯೊಬ್ಬರು ಪ್ರತ್ಯೇಕ ಶಾಲೆಗೆ ಭೇಟಿ ನೀಡುವಂತೆ ಕ್ರಮಕೈಗೊಳ್ಳುವುದು.<br>3. ಈ ಸಂಬಂಧ ಕ್ಲಸ್ಟರ್ ಹಂತದಲ್ಲಿ ನಕಾಶೆ ಸಿದ್ಧಪಡಿಸಿಕೊಳ್ಳುವುದು | ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಮಾರ್ಗದರ್ಶನದಲ್ಲಿ ಉಪನಿರ್ದೇಶಕರು ಆಡಳಿತ ಮತ್ತು ಅಭಿವೃದ್ಧಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು. |
| 3 | ಗ್ರಾಮದಲ್ಲಿ/ ನಗರದಲ್ಲಿ ಸೂಕ್ತ ಜನ ವಸತಿ ಪ್ರದೇಶಗಳನ್ನು ಗುರುತಿಸುವುದು. | 1.ಪರಿಶಿಷ್ಟ ಜಾತಿ ಮತ್ತು ವರ್ಗ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರು ಹಾಗೂ ಅಲಕ್ಷಿತ ವರ್ಗಗಳು ವಾಸ ಮಾಡುವ ಪ್ರದೇಶಗಳನ್ನು ಸ್ಥಳೀಯ ಶಾಲೆಯ ಎಸ್.ಡಿ.ಎಂ.ಸಿ. ಅಥವಾ ಗ್ರಾಮ ಪಂಚಾಯತ್‌ನವರು ಗುರುತಿಸಬೇಕು.<br>2. ಅಲ್ಲಿ ಬೆಳಗ್ಗೆ ಮೊದಲು ಎಲ್ಲರೂ ಸೇರಿ ನಂತರ ಅಲ್ಲಿಂದ ಶಾಲೆಗೆ ಜಾಥಾ ಏರ್ಪಾಟು ಮಾಡುವುದು.<br>3. ಈ ಜನವಸತಿ ಪ್ರದೇಶದಲ್ಲಿ ಸಭೆ- ಸಮಾರಂಭ | ಸಿ.ಆರ್.ಪಿ, ಬಿ.ಇ.ಓ |

| | | | |
|---|---|---|---|
| | | ನಡೆಸುವುದು ಬೇಡ.<br>4. ಜಾಥಾ ಕಾರ್ಯಕ್ರಮವನ್ನು ಶಾಲೆ ಪ್ರಾರಂಭವಾಗುವುದಕ್ಕೆ 15 ನಿಮಿಷ ಮೊದಲು, ಒಟ್ಟು 30-45 ನಿಮಿಷಗಳಲ್ಲಿ ಮುಗಿಸುವುದು.<br>5. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಜಾಥಾದ ಮೂಲಕ ಕರೆತಂದು ಶಾಲೆಗೆ ದಾಖಲಾತಿ ಮಾಡಿಸುವುದು.<br>6. ಸ್ಥಳದ ಆಯ್ಕೆ ಹಾಗೂ ಚಟುವಟಿಕೆಯ ಸ್ವರೂಪವನ್ನು ಸಿ.ಆರ್.ಪಿ ಗಮನಿಸಿ ಸೂಚನೆ ನೀಡುವುದು. | |
| 4 | ಶಾಲೆಯಲ್ಲಿ ಮೊದಲ ಕಡ್ಡಾಯ ಚಟುವಟಿಕೆಗಳು<br>ಅ. ಬೆಳಗಿನ ಪ್ರಾರ್ಥನಾ ಸಭೆಯ ಚಟುವಟಿಕೆಗಳನ್ನು ಗಮನಿಸುವುದು- ಪ್ರಾರ್ಥನೆ, ವಾರ್ತೆ ಓದುವುದು, ರಾಷ್ಟ್ರಗೀತೆ ಹಾಡುವುದು ಇತ್ಯಾದಿ...<br>ಆ. ತರಗತಿವಾರು ಮಕ್ಕಳ ಹಾಜರಾತಿ ಪರಿಶೀಲನೆ<br>ಇ. ಗ್ರಂಥಾಲಯದ ಬಳಕೆ, ಮಕ್ಕಳ ಓದುವ ಸಾಮರ್ಥ್ಯ ಪರಿಶೀಲನ<br>ಈ.ಮಕ್ಕಳ ಪಠ್ಯ ಪುಸ್ತಕ, ಸಮವಸ್ತ್ರ, ಬೈಸಿಕಲ್‌ಗಳ ಪರಿಶೀಲನೆ.<br>ಉ. ಶೌಚಾಲಯ ಪರಿಶೀಲನೆ-ಮಕ್ಕಳ ಸಂಖ್ಯೆಗೆ ಅನುಗುಣವಾಗಿದೆಯಾ?, ಬಳಕೆಗೆ ಯೋಗ್ಯವಾಗಿದೆಯಾ ಇತ್ಯಾದಿ...<br>ಊ. ತರಗತಿ ಮತ್ತು ಶಾಲಾ ಆವರಣದ ಸ್ವಚ್ಛತೆ, ತರಗತಿಗಳಲ್ಲಿ ಸ್ಥಳಾವಕಾಶ ಇತ್ಯಾದಿ...<br>ಋ. ಬಿಸಿಯೂಟ ತಯಾರಿ, ವಿತರಣೆ ಹಾಗೂ ರುಚಿಯ ಪರಿಶೀಲನೆ<br>ಎ. ಎಸ್.ಡಿ.ಎಂ.ಸಿ.ಯ ಕ್ರಿಯಾಶೀಲತೆ, ಸಮುದಾಯದ ಭಾಗವಹಿಸುವಿಕೆ ಇತ್ಯಾದಿ... | 1.ಈ ಸಂದರ್ಭದಲ್ಲಿ ತರಗತಿಗಳಲ್ಲಿ ಯಾವುದೇ ಗದ್ದಲ ಆಗದಂತೆ ಕೇವಲ ಚುನಾಯಿತ ಪ್ರತಿನಿಧಿಗಳು ಹಾಗೂ ಹಿರಿಯ ಅಧಿಕಾರಿಗಳು ಮಾತ್ರವೇ ತರಗತಿವಾರು ಪರಿಶೀಲನೆ ನಡೆಸುವಂತೆ ಕ್ರಮಕೈಗೊಳ್ಳುವುದು.<br>2. ಈ ಪರಿಶೀಲನೆಯ ಬಗ್ಗೆ ಚುನಾಯಿತ ಪ್ರತಿನಿಧಿಗಳು ಷರಾ ಬರೆದು ತಮ್ಮ ಸಹಿಯೊಂದಿಗೆ ಶಾಲೆ, ಗ್ರಾಮ ಪಂಚಾಯತ್ ಹಾಗೂ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಒಂದೊಂದು ಪ್ರತಿ ನೀಡಿ ಮುಂದಿನ ಕ್ರಮಕೈಗೊಳ್ಳುವಂತೆ ಸೂಚನೆ ನೀಡುವುದು.<br>3. ಪ್ರತಿ ಶಾಲೆಯಿಂದ ಈ ಷರಾವನ್ನು ಸಂಗ್ರಹಿಸಿ ಜನಪ್ರತಿನಿಧಿಗಳ ಹೆಸರು ಮತ್ತು ವಿವರದೊಂದಿಗೆ ರಾಜ್ಯ ಕಚೇರಿಗೆ ಕ್ರೋಡೀಕೃತ ವರದಿ ನೀಡುವುದು. | ಬಿ.ಇ.ಒ/ ಉಪನಿರ್ದೇಶಕರು ಅಭಿವೃದ್ಧಿ/ ಆಡಳಿತ |
| 5 | ಗುಣಮಟ್ಟಕ್ಕೆ ಆದ್ಯತೆ | ಶಾಲೆಯಲ್ಲಿ ಅತ್ಯುತ್ತಮ ಗುಣಮಟ್ಟದ ಶಿಕ್ಷಣ ಒದಗಿಸಲು ಸಾರ್ವಜನಿಕ ಶಿಕ್ಷಣ ಇಲಾಖೆ/ಸರ್ಕಾರದ ಕ್ರಮಗಳ ಬಗ್ಗೆ ರಾಜ್ಯ ಕಚೇರಿ ಒದಗಿಸುವ ಟಿಪ್ಪಣಿಯನ್ನು ಚುನಾಯಿತ ಪ್ರತಿನಿಧಿಗಳ/ ಹಿರಿಯ ಅಧಿಕಾರಿಗಳ ಮುಖಾಂತರ ಸಭೆಯಲ್ಲಿ ಮಂಡಿಸುವುದು. | ಉಪನಿರ್ದೇಶಕರು ಅಭಿವೃದ್ಧಿ/ ಆಡಳಿತ |
| 6 | ಗ್ರಾಮ ಪಂಚಾಯತ್ ಶ್ವೇತ ಪತ್ರ | 1. ಶ್ವೇತಪತ್ರದ ನಮೂನೆಯನ್ನು ಜಿಲ್ಲೆಗಳಿಗೆ ಒದಗಿಸಲಾಗಿದ್ದು, ಪ್ರತಿ ಗ್ರಾಮ ಪಂಚಾಯತ್‌ಗೆ | ಉಪನಿರ್ದೇಶಕರು (ಆಡಳಿತ) |

| | | | |
|---|---|---|---|
| | | ಎರಡು ಮುದ್ರಿತ ಪ್ರತಿಗಳನ್ನು ಒದಗಿಸುವುದು.<br>2. ಗ್ರಾಮ ಪಂಚಾಯತ್‌ನಲ್ಲಿ ನಮೂನೆಗಳನ್ನು ತುಂಬಿಸಲು ಸಿ.ಆರ್.ಪಿ.ಗಳು ಸಹಕಾರ ನೀಡುವುದು. (ನಗರ ಪ್ರದೇಶಗಳಲ್ಲಿ ವಾರ್ಡ್ ಅಥವಾ ಸೂಕ್ತ ವ್ಯಾಪ್ತಿಯಲ್ಲಿ)<br>3. ಹೀಗೆ ಭರ್ತಿ ಮಾಡಲ್ಪಟ್ಟ ಶ್ವೇತ ಪತ್ರವನ್ನು ಜುಲೈ5ರ ಸಭೆಯಲ್ಲಿ ಗ್ರಾಮ ಪಂಚಾಯತ್ ಪ್ರತಿನಿಧಿ ಮಂಡಿಸುವುದು. 4. ನಂತರ ಒಂದು ಪ್ರತಿಯನ್ನು ಗ್ರಾಮಪಂಚಾಯತ್‌ನಲ್ಲಿ, ತಲಾ ಒಂದೊಂದು ಪ್ರತಿಯನ್ನು ಗ್ರಾಮ ಪಂಚಾಯತ್ ವ್ಯಾಪ್ತಿಯ ಎಲ್ಲ ಶಾಲೆಗಳಲ್ಲಿ ಇಡುವುದು. ಹಾಗೂ ಒಂದು ಪ್ರತಿಯನ್ನು ಉಪನಿರ್ದೇಶಕರಿಗೆ ತಲುಪಿಸುವುದು.<br>5. ಜಿಲ್ಲಾ ಕ್ರೋಢೀಕೃತ ಮಾಹಿತಿಯನ್ನು ಉಪನಿರ್ದೇಶಕರು ದಿನಾಂಕ:15-06-2011ರೊಳಗೆ ರಾಜ್ಯ ಕಛೇರಿಗೆ ತಲುಪಿಸುವುದು. | |
| 7 | ಮಕ್ಕಳ ಶಿಕ್ಷಣದ ಹಕ್ಕು ಕಾಯಿದೆ ಹಾಗೂ ಕಾಯಿದೆಯ ಅನುಷ್ಠಾನದಲ್ಲಿ ಎಸ್.ಡಿ.ಎಂ.ಸಿ.ಯ ಪಾತ್ರ ಕುರಿತ ಮಾಹಿತಿ ಪತ್ರ (brochure) | 1.ಮಕ್ಕಳ ಶಿಕ್ಷಣದ ಹಕ್ಕು ಕಾಯ್ದೆ ಕುರಿತು ಹಾಗೂ ಈ ಕಾಯ್ದೆಂಖ ಅನುಷ್ಠಾನದಲ್ಲಿ ಎಸ್.ಡಿ.ಎಂ.ಸಿ ಪಾತ್ರ ಕುರಿತು ಎರಡು ಪ್ರತ್ಯೇಕ ಮಾಹಿತಿ ಪತ್ರಗಳನ್ನು ಸಿದ್ಧಪಡಿಸಿದ್ದು ಮುದ್ರಣಕ್ಕಾಗಿ ಉಪನಿರ್ದೇಶಕರುಗಳಿಗೆ ಕಳುಹಿಸಲಾಗಿದೆ.<br>2. ಇವು ಸಾಕಷ್ಟು ಸಂಖ್ಯೆಯಲ್ಲಿ ಮುದ್ರಣಗೊಂಡು ಜುಲೈ 5ರಂದು ಎಲ್ಲಾ ಶಾಲೆಗಳಲ್ಲಿ ಬಿಡುಗಡೆಗೊಳ್ಳಲು ಸಿದ್ಧವಿರಬೇಕು.<br>3. ಎಸ್.ಡಿ.ಎಂ.ಸಿ.ಯ ಕೈಪಿಡಿಯನ್ನು ಎಲ್ಲ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಎಸ್.ಡಿ.ಎಂ.ಸಿ. ಸದಸ್ಯರುಗಳಿಗೆ ಒದಗಿಸಬೇಕು.<br>4. ಶಿಕ್ಷಣದ ಹಕ್ಕು ಕಾಯಿದೆ ಕುರಿತ ಕೈಪಿಡಿಯನ್ನು ಎಲ್ಲ ಹಂತಗಳ ಚುನಾಯಿತ ಪ್ರತಿನಿಧಿಗಳು ಹಾಗೂ ಪೋಷಕರು, ಸಂಘ ಸಂಸ್ಥೆಗಳು, ಹಳೆಯ ವಿದ್ಯಾರ್ಥಿಗಳು, ಅಧಿಕಾರಿಗಳು, ಮೊದಲಾದವರಿಗೆ ವಿತರಿಸಲು ವ್ಯವಸ್ಥೆ ಮಾಡುವುದು. | ಬಿ.ಇ.ಒ./ ಉಪನಿರ್ದೇಶಕರು (ಆಡಳಿತ) |
| 8 | ಶಿಕ್ಷಣದ ಹಕ್ಕು ಮಾಹಿತಿ ಗೋಡೆ | 1.ಇದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಉಪನಿರ್ದೇಶಕರುಗಳಿಗೆ ಸಾಫ್ಟ್ ಕಾಪಿಯಲ್ಲಿ ತಲುಪಿಸಲಾಗಿದೆ.<br>2. ಪ್ರತಿಯೊಂದು ಗ್ರಾಮ ಪಂಚಾಯತ್ ಕಛೇರಿಯಲ್ಲಿ 4x6 ಅಡಿ ಅಳತೆಯಲ್ಲಿ ಈ ಮಾಹಿತಿಯನ್ನು ಬರೆಸತಕ್ಕದ್ದು.<br>3. ಜುಲೈ 5ರಂದು ಶಾಲೆಯಲ್ಲಿ ಕಾರ್ಯಕ್ರಮ ಮುಗಿದ ನಂತರ ಗ್ರಾಮಪಂಚಾಯತ್ | ಬಿ.ಇ.ಒ./ ಉಪನಿರ್ದೇಶಕರು (ಆಡಳಿತ) |

| | | | |
|---|---|---|---|
| | | ಕಛೇರಿಯಲ್ಲಿ ಈ ಮಾಹಿತಿ ಗೋಡೆಯನ್ನು ಅನಾವರಣಗೊಳಿಸುವುದು. | |
| 9 | ಮಕ್ಕಳ ಶಿಕ್ಷಣದ ಹಕ್ಕು ಕಾಯಿದೆಯ ಬಗ್ಗೆ ಬದ್ಧತೆಯ ಘೋಷಣೆ | 1. ಮಕ್ಕಳ ಶಿಕ್ಷಣದ ಹಕ್ಕು ರಕ್ಷಣೆಯಲ್ಲಿ ತಮ್ಮ ಹೊಣೆಗಾರಿಕೆ ನಿರ್ವಹಿಸುವುದಾಗಿ ಚುನಾಯಿತ ಪ್ರತಿನಿಧಿಗಳು ಸೇರಿದಂತೆ ಕಾರ್ಯಕ್ರಮದಲ್ಲಿ ಸೇರಿದ ಎಲ್ಲರೂ ಬದ್ಧತೆ ವ್ಯಕ್ತಪಡಿಸಬೇಕು. | ಬಿ.ಇ.ಓ/ಉಪನಿರ್ದೇಶಕರು (ಆಡಳಿತ) |
| 10 | ಎಸ್.ಡಿ.ಎಂ.ಸಿ. ಹೊಣೆಗಾರಿಕೆ | 1.ಶಾಲಾ ಕಾರ್ಯಕ್ರಮದ ನಂತರ ಪ್ರತಿ ಶಾಲೆಯಲ್ಲಿ ಎಸ್.ಡಿ.ಎಂ.ಸಿ. ಸಭೆ ಸೇರಿ ಶಿಕ್ಷಣದ ಹಕ್ಕು ಕಾಯಿದೆಯ ಹಿನ್ನೆಲೆಯಲ್ಲಿ ತಮ್ಮ ಜವಾಬ್ದಾರಿಗಳ ಕುರಿತು ಚರ್ಚಿಸಿ, ನಿರ್ಣಯಗಳನ್ನು ಕೈಗೊಳ್ಳುವುದು.<br>2. ಶ್ವೇತ ಪತ್ರ ಮತ್ತು ಚುನಾಯಿತ ಪ್ರತಿನಿಧಿಗಳು ನೀಡಿದ ಶಾಲಾ ಚಟುವಟಿಕೆಗಳ ಟಿಪ್ಪಣಿಯನ್ನು ಆಧರಿಸಿ ಶಿಕ್ಷಣದ ಹಕ್ಕು ಕಾಯಿದೆಯ ಹಿನ್ನೆಲೆಯಲ್ಲಿ ಮುಂದಿನ ಕ್ರಮಗಳ ಕುರಿತು ಯೋಜನೆ ಸಿದ್ಧಪಡಿಸಿ ಶಾಲಾ ಹಂತದಲ್ಲಿ ಕ್ರಮಕೈಗೊಳ್ಳುವುದು. | ಬಿ.ಇ.ಓ./ ಉಪನಿರ್ದೇಶಕರು ಅಭಿವೃದ್ಧಿ/ಆಡಳಿತ |
| 11 | ಇತರೆ | ತಮ್ಮ ಆಸಕ್ತಿಗಳಿಗೆ ಅನುಗುಣವಾಗಿ ಸ್ಥಳೀಯ ಸಮುದಾಯ/ ಶಾಲೆ ಸೂಚಿಸುವ ಇತರೆ ಯಾವುದೇ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದಾಗಿದೆ. | ಸಮುದಾಯ |

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಪ್ರತಿಗಳನ್ನು

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ
2. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ ಮತ್ತು ಮಾಧ್ಯಮಿಕ ಶಿಕ್ಷಣ ಅಭಿಯಾನ
3. ಅಪರ ಆಯುಕ್ತರು, ಸಾ.ಶಿ.ಇ., ಧಾರವಾಡ ಮತ್ತು ಗುಲ್ಬರ್ಗ
4. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ.
5. ರಾಜ್ಯದ ಎಲ್ಲಾ ವಿಭಾಗೀಯ ಸಹ ನಿರ್ದೇಶಕರುಗಳಿಗೆ
6. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಆಡಳಿತ ಮತ್ತು ಅಭಿವೃದ್ಧಿ
7. ಸಾ.ಶಿ. ಇಲಾಖೆಯ ಎಲ್ಲ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ
8. ಕ.ಪ್ರತಿ